# ನವಿಲುಗನ್ನಡಿ

- ಅಕ್ಟೋಬರ್ ಸಂಚಿಕೆ ಅನಿರ್ವಚನೀಯ ಆನಂದ ನೀಡಿತು. ಎಲ್ಲಾ ಕಥೆಗಳು ಓದಿಸಿಕೊಂಡವು. 'ಗಾವು', 'ಒಂದು ಮಳೆಯೊಳಗೆ', 'ಪಾಲು' ಕಥೆಗಳು ವಿಶಿಷ್ಟ ಅನುಭವ ನೀಡುವುದರ ಜೊತೆಗೆ ಮನುಷ್ಯ ಸಂಬಂಧಗಳ ಬೇರೆ ಬೇರೆ ಆಯಾಮಗಳನ್ನು ಪರಿಚಯಿಸಿದವು.

**ಮಾರುತಿ ಗೋಪಿಕುಂಟೆ, ಸಿರಾ**

- ಎಂ.ಎಸ್. ಮೂರ್ತಿ ಅವರು ರಚಿಸಿದ ಅರ್ಥಪೂರ್ಣ ಮುಖಪುಟ ಹೊತ್ತ ಅಕ್ಟೋಬರ್ ಸಂಚಿಕೆ ಆಕರ್ಷಿಸಿತು. ಮಣಿಪುರಿ ನೃತ್ಯಪಟು ದರ್ಶನಾ ಜವೇರಿ ಸಂದರ್ಶನ, ಸುಮತೀಂದ್ರ ನಾಡಿಗ (ಸಿದ್ಧಲಿಂಗ ಪಟ್ಟಣಶೆಟ್ಟಿ), ಜಯಂತ್ ಮಹಾಪಾತ್ರ ಕುರಿತ ಬರಹ (ಮೀನಾ ಮೈಸೂರು) ಆತ್ಮೀಯವಾಗಿದ್ದವು. 'ಪೊರಕೆ ಸಾಹೇಬ್ರು ಮತ್ತು ತಿಮ್ಮಪ್ಪ ಮೇಷ್ಟ್ರು' (ಗುರುಪ್ರಸಾದ್ ಕಂಟಲಗೆರೆ), 'ರಾಮಕ್ಕನ ನವೋದ್ಯಮವು ಬರಖಾಸ್ತಾದುದು' (ಕೇಶವ ಕುಡ್ಲ), 'ಇಲ್ಲ, ಇಲ್ಲ, ನಾನೊಬ್ಬ ಕ್ಷೌರಿಕ, ಅಷ್ಟೇ!' ಆನಂದತೀರ್ಥ ಪ್ಯಾಟಿ ಅನುವಾದಿತ ಕಥೆ, 'ಪಾಲು' (ಕೇಶವರೆಡ್ಡಿ ಹಂದ್ರಾಳ) ಒಂದೊಂದು ಕಥೆಯೂ ಅದ್ಭುತ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಕೇಶವರೆಡ್ಡಿ ಹಂದ್ರಾಳರ 'ಪಾಲು' ಕಥೆ ಇಷ್ಟವಾಯಿತು. ಈ ಕಥೆ ಮಾರ್ಕ್ಸ್ ಮತ್ತು ಗಾಂಧಿ ಪ್ರತಿಪಾದಿಸಿದ ಆರ್ಥಿಕ ಸಿದ್ಧಾಂತಗಳು ಇಂದಿನ ಆಡಳಿತಗಾರರ ಕೈಯಲ್ಲಿ ಹೇಗೆ ಬಳಕೆಯಾಗುತ್ತಿವೆ ಎಂಬುದನ್ನು ಕಲಾತ್ಮಕವಾಗಿ ಚಿತ್ರಿಸಿದೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಸಿಂಪಿ ಲಿಂಗಣ್ಣ ಅವರ 'ಅಣ್ಣ ಬಾಪು' ಏಕಾಂಕ ನಾಟಕದ ರೂಪಕ ಓದಿ ಮನಸ್ಸು ಮುದಗೊಂಡಿತು. ಬಸವಣ್ಣ ಮತ್ತು ಗಾಂಧೀಜಿಯವರ ಕಲ್ಪಿತ ಒಡನಾಟಗಳು ಹೃದಯಂಗಮವಾಗಿ ಮೂಡಿವೆ.

**ಇಸ್ಮಾಯಿಲ್ ಯಲಿಗಾರ, ಹರಪನಹಳ್ಳಿ**

- ಸುಮತೀಂದ್ರ ನಾಡಿಗರೊಂದಿಗಿನ ಒಡನಾಟದ




ನೆನಪುಗಳ ಬರಹ (ಕಲ್ಲುಸಕ್ಕರೆ) ನಾಡಿಗರ ಸರ್ವಶಕ್ತ, ಪರಿಪಕ್ವ ವ್ಯಕ್ತಿತ್ವವನ್ನು ಪರಿಚಯಿಸಿತು.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**

- ವೆಂಕಟೇಶ ಮಾಚಕನೂರ ಅವರ 'ಸೊಳ್ಳೆಗಳ ಹತ್ಯೆ ಮತ್ತು ಪಾಪ ಪ್ರಜ್ಞೆ' ಪ್ರಬಂಧ ಚೆನ್ನಾಗಿತ್ತು. ತಿಳಿ ಹಾಸ್ಯದೊಂದಿಗೆ ಅವರು ಮಂಡಿಸಿದ ವಿಷಯ ಚಿಂತನೆಗೆ ಹಚ್ಚಿತು.

**ಹೂವಿನಹಳ್ಳಿ ನಾಗರಾಜ, ಕಲಬುರಗಿ**

- 'ಪೊರಕೆ ಸಾಹೇಬ್ರು ಮತ್ತು ತಿಮ್ಮಪ್ಪ ಮೇಷ್ಟ್ರು' (ಗುರುಪ್ರಸಾದ್ ಕಂಟಲಗೆರೆ) ಕಥೆ ಮೇಷ್ಟ್ರುಗಳ ಈಗಿನ ಬವಣೆಯನ್ನು ಬಿತ್ತರಿಸುತ್ತದೆ.

**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

- ಪ್ರಕೃತಿ ವಿಕೋಪವೂ ಕೆಲವೊಮ್ಮೆ ಹೇಗೆ ಒಡೆದ ಮನಸ್ಸುಗಳನ್ನೂ ಒಂದುಗೂಡಿಸಬಹುದೆಂಬುದನ್ನು ಸ್ಮಿತಾ ಅಮೃತರಾಜ್ 'ಒಂದು ಮಳೆಯೊಳಗೆ' ಕಥೆಯಲ್ಲಿ ಸ್ವಾರಸ್ಯಕರವಾಗಿ ವಿವರಿಸಿದ್ದಾರೆ.

**ಶಂಕರನಾರಾಯಣ ಭಟ್, ಮಾಡಗೇರಿ**

- ಕಮಲಾ ನರಸಿಂಹ ಅವರ 'ಗಾವು' ಕಥೆ, ಪ್ರಚಲಿತ ವಿಜ್ಞಾನ ಯುಗದಲ್ಲಿಯೂ ಅಜ್ಞಾನ ಮೂಢನಂಬಿಕೆ ಇನ್ನೂ ಜೀವಂತವಾಗಿದೆ ಎಂಬುದನ್ನು ಚೆನ್ನಾಗಿ ಹಿಡಿದಿಟ್ಟಿದೆ.

**ಸಿ.ಕೆ.ಗಣಪ್ಪನವರ, ಡಂಬಳ**